
ಒಮ್ಮೆ ಅಚಾನಕ್ ಆಗಿ ಅವನ ಭೇಟಿಯಾಯಿತು. ಎತ್ತಲೋ ನೋಡುತ್ತಾ ಪಾರ್ಕಿನಲ್ಲಿ ಕುಳಿತಿದ್ದ ಅವನು ವಯಸ್ಸಾದ ಪ್ರೊಫೆಸರ್ ರೀತಿ ಕಾಣುತ್ತಿದ್ದ. ಬಹಳ ದಿನಗಳ ನಂತರ ಸಿಕ್ಕ ಅವನನ್ನು ಮಾತನಾಡಿಸಿದೆ. ಮೊದಮೊದಲು ಮಾತನಾಡಲು ಅಷ್ಟೇನೂ ಇಷ್ಟಪಡದ ಆತ ಕೊನೆಗೆ ನಿಧಾನವಾಗಿ ತನ್ನ ಕಷ್ಟಗಳನ್ನು ಹೇಳಿಕೊಂಡ. ಅವನು ಹೇಳಿದ ಕರುಣಾಜನಕ ಕಥೆಗಳು ಎಂತಹ ಕಲ್ಲು ಹೃದಯವನ್ನೂ ಕರಗಿಸುವಂತಿತ್ತು. ಆಗತಾನೇ ಪದವಿ ಮುಗಿಸಿದ್ದ ಈತ ಬೆಂಗಳೂರಿನ ಯಾವುದೋ ಕಾಲೇಜಿನಲ್ಲಿ ಎಂಟ್ರೆನ್ಸ್ ಪರೀಕ್ಷೆ ಬರೆಯಲು ಹೋಗಿದ್ದನಂತೆ. ಬಹಳ ದೊಡ್ಡ ಕಾಲೇಜು. ಠಾಕುಠೀಕಾಗಿ ಡ್ರೆಸ್ ಮಾಡಿಕೊಂಡಿದ್ದ ಇವನು ಪರೀಕ್ಷಾ ಕೊಠಡಿಯನ್ನು ಪ್ರವೇಶಿಸುತ್ತಿದ್ದಂತೆ ಅಲ್ಲಿದ್ದ ಅಷ್ಟೂ ಅಭ್ಯರ್ಥಿಗಳು ಇವನನ್ನು ಮೇಲ್ವಿಚಾರಕರು ಎಂದು ಎಣಿಸಿ ಎದ್ದು ನಿಂತರಂತೆ. ಮುಜುಗರಕ್ಕೊಳಗಾದ ಈತ ನಾನೂ ನಿಮ್ಮಂತೆಯೇ ಅಭ್ಯರ್ಥಿ, ದಯವಿಟ್ಟು ಕುಳಿತುಕೊಳ್ಳಿ ಎಂದು ಹೇಳಿ ತನ್ನ ಸ್ಥಾನದಲ್ಲಿ ಕುಳಿತನಂತೆ. ಬಸ್ಸುಗಳಲ್ಲಂತೂ ಸುಂದರ ಯುವತಿಯರು ತನ್ನನ್ನು 'ಅಂಕಲ್' ಎಂದು ಕರೆಯುತ್ತಾರೆಂಬುದು ಈತನ ಅಳಲು. ಕೊನೆಗೆ ಮದುವೆಯಾದರೂ ಆಗೋಣವೆಂದು ಕನ್ಯೆ ನೋಡಲು ಬಯೋಡೇಟಾದ ಜೊತೆಗೆ ಭಾವಚಿತ್ರ ಕಳುಹಿಸಿದರೆ ಅದು ಹೋದ ವೇಗದಲ್ಲಿಯೇ ವಾಪಾಸ್ ಬರುತ್ತಿತ್ತಂತೆ. ಬಕ್ಕತಲೆಯ ಭಾವಚಿತ್ರವನ್ನು ನೋಡಿದ ಒಂದು ಹುಡುಗಿಯೂ ತನ್ನನ್ನು ಒಪ್ಪುತ್ತಿಲ್ಲ, ಸ್ನೇಹಿತರಿಗೆಲ್ಲಾ ಮದುವೆಯಾಗಿದ್ದರೂ ತನಗೆ ಮಾತ್ರ ಮದುವೆಯಾಗುತ್ತಿಲ್ಲವಲ್ಲ ಎಂಬ ಕೊರಗು ಈತನಿಗೆ. ಇವನ ಸಮಸ್ಯೆಗೆ ಬೇರೇನೂ ಮಾಡಲು ತೋಚದೆ ಬೇಸರವಾದಂತೆ ನಟಿಸುತ್ತಾ ಅವನಿಗೆ ವಿದಾಯ ಹೇಳಿದೆ.

ಇದಾಗಿ ಸುಮಾರು ಒಂದು ವರ್ಷದ ನಂತರ, ಒಮ್ಮೆ ಒಂದು ಮಾಲ್‌ನಲ್ಲಿ ಕನ್ನಡ ಸಿನಿಮಾ ನೋಡಿಕೊಂಡು ನಾನು ಹೊರಗೆ ಬಂದಾಗ ಎದುರಿನಲ್ಲಿ ಒಂದು ಜೋಡಿ ನಗುತ್ತಾ ನನ್ನತ್ತ ಬರುತ್ತಿರುವುದು ಕಂಡಿತು. ಆತನ ಮುಖ ಬಹಳ ಪರಿಚಿತ ಎನಿಸಿದರೂ ಆತನ ತುಂಬಿದ ತಲೆಗೂದಲಿಗೂ ಮುಖಕ್ಕೂ ಮ್ಯಾಚ್ ಆಗುತ್ತಿಲ್ಲವಲ್ಲ ಎನಿಸುವಷ್ಟರಲ್ಲಿ ಆತನೇ ಹಲ್ಲುಕಿರಿಯುತ್ತಾ ಹತ್ತಿರ ಬಂದಾಗ ಆತನನ್ನೇ ಸೂಕ್ಷ್ಮವಾಗಿ ನೋಡಿದೆ. 'ಅಯ್ಯೋ ಅವನು ನನ್ನ ಕಾಲೇಜ್ ಸ್ನೇಹಿತನಲ್ಲವೇ!!' ಎಂದು ತಕ್ಷಣ ನನಗೆ ಫ್ಲ್ಯಾಷ್ ಆಯಿತು. ಆತನೇ ಮಾತನಾಡಿಸಿ ತನ್ನ ಸುಂದರ ಹೆಂಡತಿಗೆ ನನ್ನನ್ನು ಪರಿಚಯಿಸಿದ. ಅಂತೂ ಈತನಿಗೂ ಮದುವೆಯಾಯಿತಲ್ಲ, ಅದರಲ್ಲೂ ಸುಂದರ ಹೆಂಡತಿ ಸಿಕ್ಕಳಲ್ಲ ಎಂದು ನಾನು ಅವನಿಗೆ ಅಭಿನಂದಿಸಿದೆ. ತನ್ನ ದಟ್ಟವಾದ ಕೂದಲು ತುಂಬಿದ ತಲೆಯನ್ನೇ ನಾನು ನೋಡುತ್ತಿರುವುದನ್ನು ಗಮನಿಸಿದ ಆತ 'ಈಗ ನಿನ್ನೊಂದಿಗೆ ಇದನ್ನು ಹೇಳಲು ನನಗೆ ಯಾವುದೇ ಸಂಕೋಚವಿಲ್ಲ. ಈಗ ತಲೆಗೆ ವಿಗ್ ಹಾಕಿಕೊಳ್ಳುತ್ತಿದ್ದೇನೆ. ಅದು ಹಾಕಿಕೊಂಡ ಮೇಲೆ ನನ್ನ ಹಳೆಯ ರೂಪ ಮತ್ತೆ ನನಗೆ ಸಿಕ್ಕಿತು ಮತ್ತು ಈ ಸುಂದರ ಹೆಂಡತಿಯೂ ನನಗೆ ಸಿಕ್ಕಳು' ಎಂದ. 'ಅಂತೂ ತಲೆಗೂದಲಲ್ಲಿ ಹೋದ ನೆಮ್ಮದಿ ವಿಗ್‌ನಲ್ಲಿ ಸಿಕ್ಕಿತಲ್ಲವೇ?' ಎಂದು ಪ್ರಶ್ನಿಸಿದ್ದಕ್ಕೆ ಆತ 'ನೋಡು ಗೆಳೆಯಾ, ಜೀವನವೇ ನಶ್ವರ. ಇಲ್ಲಿ ಯಾವುದೂ ಶಾಶ್ವತವಲ್ಲ, ಈ ದೇಹಕ್ಕೇ ಗ್ಯಾರಂಟಿಯಿಲ್ಲ, ಅಂತಾದ್ದರಲ್ಲಿ ಈ ಪುಟಗೋಸಿ ತಲೆಗೂದಲ ಬಗ್ಗೆ ಯಾಕೆ ನಾವು ಇಷ್ಟು ತಲೆಕೆಡಿಸಿಕೊಳ್ಳಬೇಕು? ಈ ಕೂದಲ ಬಗ್ಗೆ ಮನುಷ್ಯರಿಗೆ ಯಾಕಿಷ್ಟು ವ್ಯಾಮೋಹ?' ಎಂದು ಒಂದೇ ಮಾತಿನಲ್ಲಿ ನನಗೆ ಜೀವನದ ನಿರರ್ಥಕತೆಯ ಫಿಲಾಸಫಿಯನ್ನು ತಿಳಿಸಿ ಮಾಯವಾದ. ಒಂದು ಕಾಲದಲ್ಲಿ ಕೂದಲ ಬಗ್ಗೆ ಈತ ತಲೆಕೆಡಿಸಿಕೊಂಡಷ್ಟು ಬೇರೆ ಯಾರೂ ತಲೆಕೆಡಿಸಿಕೊಂಡಿರಲಿಲ್ಲ ಎಂದುಕೊಂಡ ನಾನು ಬಿಟ್ಟ ಬಾಯಿಯನ್ನು ನಿಧಾನವಾಗಿ ಮುಚ್ಚಿಕೊಂಡು ಅಲ್ಲಿಂದ ನಿರ್ಗಮಿಸಿದೆ.



ಅವನು ಹೇಳಿದ ಮಾತುಗಳ ಬಗ್ಗೆ ಯೋಚಿಸತೊಡಗಿದೆ. ಅವನು ಹೇಳಿದ್ದರಲ್ಲಿ ಎಷ್ಟೊಂದು ಸತ್ಯವಿದೆ ಎನಿಸಿತು. ಜೀವನದಲ್ಲಿ ಬಾಲ್ಯ, ಯೌವ್ವನ, ಪ್ರೌಢ ಮತ್ತು ಮುಪ್ಪು ಎಂಬ ಹಂತಗಳಲ್ಲಾಗುವ ದೈಹಿಕ ಬದಲಾವಣೆಯು ಎಲ್ಲಾ ಜೀವಿಗಳಲ್ಲೂ ಆಗುತ್ತದೆ. ಬದಲಾವಣೆ ಎನ್ನುವುದು ಜಗದ ನಿಯಮ. ಇಲ್ಲಿ ಯಾವುದೂ ಶಾಶ್ವತವಲ್ಲ. ಹಾಗೆಯೇ